ಭಟ್ಟರ ಜೊತೆ ಇದ್ದ ಅವರು, ಅಲ್ಲಿ ಸುಮಾರು ಸಿನಿಮಾಗಳ ಸ್ಕ್ರಿಪ್ಟ್ ಬರವಣಿಗೆಯ ತಾಲೀಮು ನಡೆಸಿದರು. ಭಟ್ಟರ 'ದನ ಕಾಯೋನು' ಮತ್ತು 'ಮುಗುಳುನಗೆ' ಚಿತ್ರಗಳಿಗೆ ಸಹ ನಿರ್ದೇಶಕರಾಗಿ ದುಡಿದರು. ಈ ನಡುವೆ 'ಅಳಿದು ಉಳಿದವರು', 'ವೃಕ್ಷಂ', 'ನಿನ್ನ ಸನಿಹಕೆ', 'ಯೆಲ್ಲೋ ಗ್ಯಾಂಗ್ಸ್', 'ಒಂದು ಸನ್ನೆ ಒಂದು ಮಾತು' ಹೀಗೆ ಹಲವು ಸಿನಿಮಾಗಳಿಗೆ ಸಂಭಾಷಣೆ ಬರೆಯುವ ಅವಕಾಶ ದೊರೆಯಿತು. ಹೀಗೆ ಸುಮಾರು ಹತ್ತು ವರ್ಷ ಸಿನಿಮಾರಂಗದಲ್ಲಿ ಅನುಭವ ಪಡೆದ ನಂತರ ಸ್ವತಂತ್ರ ನಿರ್ದೇಶಕನಾಗುವ ಹಂಬಲ ಮೂಡಿತು.

ಮೊದಲ ಚಿತ್ರಕ್ಕಾಗಿ ಬಂಡವಾಳ ಹೂಡುವವರ ಹುಡುಕಾಟದಲ್ಲಿದ್ದ ಪ್ರವೀಣ್ ಅವರ ನೆರವಿಗೆ ಬಂದದ್ದು ಅವರ ಎಂಜಿನಿಯರಿಂಗ್ ಸಂಗಾತಿಗಳು. ಅವರ ಜೊತೆಗೆ ಹೈಸ್ಕೂಲ್ ಸಹಪಾಠಿಗಳು, ಊರಿನ ಸ್ನೇಹಿತರೂ ಕೈಜೋಡಿಸಿದರು. ಒಟ್ಟು 75 ಮಂದಿ ಸೇರಿ ಸಿನಿಮಾ ನಿರ್ಮಾಣಕ್ಕೆ ಮುಂದಾದರು. ಹೀಗೆ ಸಮೂಹ ಬಂಡವಾಳದಿಂದ ಆರಂಭವಾದ ಚಿತ್ರವೇ 'ಅಮರ ಪ್ರೇಮಿ ಅರುಣ್'.

ಮೆಡಿಕಲ್ ರೆಪ್ ಒಬ್ಬ ಮದುವೆಯಾಗಲು ತನ್ನ ಹಳೆಯ ಗೆಳತಿಯನ್ನು ಹುಡುಕಿ ಹೊರಡುವ ಕಥೆ ಚಿತ್ರದಲ್ಲಿದೆ. ಈ ಹುಡುಕಾಟದಲ್ಲೇ ತನ್ನನ್ನು ತಾನು ಕಂಡುಕೊಳ್ಳುತ್ತಾನೆ, ಸಂಬಂಧಗಳನ್ನು ಕಂಡುಕೊಳ್ಳುತ್ತಾನೆ. ಇದು ಇಬ್ಬರು ಪ್ರೇಮಿಗಳ, ಎರಡು ಕುಟುಂಬಗಳ ಕಥೆ. ಇದು ರೊಮ್ಯಾಂಟಿಕ್ ಕಾಮಿಡಿ, ಫ್ಯಾಮಿಲಿ ಡ್ರಾಮಾ ಆಗಿದ್ದು, ಮನೆಮಂದಿಯೆಲ್ಲಾ ಪಾತ್ರಗಳಾಗಿರುವ, ಮನೆಮಂದಿ ಕೂತು ನೋಡಬಹುದಾದ ಸಿನಿಮಾ ಎನ್ನುತ್ತಾರೆ ಪ್ರವೀಣ್.

ಕಿರಣ್ ರವೀಂದ್ರನಾಥ್ ಸಂಗೀತ ನಿರ್ದೇಶಕ, ಪ್ರವೀಣ್ ಶಂಭುಲಿಂಗಂ ಛಾಯಾಗ್ರಹಣ, ಮನು ಶೆಡ್ಗಾರ್ ಸಂಕಲನಕಾರರಾಗಿದ್ದು, ಹರಿ ಶರ್ವಾ, ದೀಪಿಕಾ ಆರಾಧ್ಯ, ಧರ್ಮಣ್ಣ ಕಡೂರು, ಕೃತಿ ಭಟ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಮಂಜಮ್ಮ ಜೋಗತಿ, ಹುಲಗಪ್ಪ ಕಟ್ಟೀಮನಿ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಬಳ್ಳಾರಿ ಸೀಮೆಯಲ್ಲಿ ನಡೆಯುವ ಕಥೆ ಇದಾಗಿದ್ದು, ಪಾತ್ರಗಳು ಬಳ್ಳಾರಿ ಉಪಭಾಷೆಯಲ್ಲಿ ಸಂಭಾಷಣೆ ನಡೆಸುತ್ತವೆ. ಅದಕ್ಕಿಂತಲೂ ಮುಖ್ಯವಾಗಿ, ಸಂಪೂರ್ಣ ಬಳ್ಳಾರಿ ಸೀಮೆಯಲ್ಲಿಯೇ ಚಿತ್ರೀಕರಿಸಲಾಗಿರುವ ಕನ್ನಡದ ಮೊದಲ ಸಿನಿಮಾ ಇದು.

ಸಿನಿಮಾ ಅನ್ನೋ ಮಾಯಾಂಗನೆಯ ಮೋಹಕ್ಕೆ ಸಿಲುಕಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಸುಸೂತ್ರ ಜೀವನ ನಡೆಸುವ ಅವಕಾಶ ತ್ಯಜಿಸಿದವರು ಪ್ರವೀಣ್. ನಾನಾ ಪಾಡು ಪಟ್ಟು ಅವರು ರೂಪಿಸಿರುವ 'ಅಮರ ಪ್ರೇಮಿ ಅರುಣ್' ಇದೇ ಏ. 25ರಂದು ಬಿಡುಗಡೆ ಆಗುತ್ತಿದ್ದು, ಅರುಣನ ಪ್ರೀತಿಯ ಹುಡುಕಾಟ ಸಿನಿಪ್ರಿಯರಿಗೆ ಖಂಡಿತ ಇಷ್ಟವಾಗುತ್ತದೆ ಎನ್ನುವ ವಿಶ್ವಾಸದಲ್ಲಿದ್ದಾರೆ. ■

# ಶಿವಣ್ಣ 'ಆ್ಯಕ್ಷನ್'



ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಂಡಿರುವ ನಟ ಶಿವರಾಜ್ ಕುಮಾರ್ ಮೊದಲಿನ ಎನರ್ಜಿಯೊಂದಿಗೆ ಮತ್ತೆ ಬಂದಿದ್ದಾರೆ. ಸಾಲು ಸಾಲು ಸಿನಿಮಾಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ.

ರಾಮ್‌ಚರಣ್ ನಟನೆಯ 'ಪೆದ್ದಿ' ಚಿತ್ರೀಕರಣದಲ್ಲಿ ಎರಡು ದಿನ ಪಾಲ್ಗೊಂಡಿದ್ದಾರೆ. '131' ಚಿತ್ರೀಕರಣ ಮುಗಿಸಿ ಇನ್ನೊಂದು ಚಿತ್ರ ಶುರು ಮಾಡಲಿದ್ದು, ಪವನ್ ಒಡೆಯರ್ ಜೊತೆ ಸಿನಿಮಾ ಚಿತ್ರೀಕರಣ ಪ್ರಾರಂಭಿಸಲು ರೆಡಿಯಾಗಿದ್ದಾರೆ.

ಇದೇ ಸಂದರ್ಭ, ತಮ್ಮ 'ಆ್ಯಕ್ಷನ್' ಪ್ರೀತಿ ಕುರಿತು ಮಾತನಾಡಿರುವ ಅವರು, 'ಜೂನ್ ಅಷ್ಟರಲ್ಲಿ ಸಂಪೂರ್ಣ ಆ್ಯಕ್ಷನ್ ಸೀಕ್ವೆನ್ಸ್‌ನಲ್ಲಿ ತೊಡಗಿಕೊಳ್ಳುತ್ತೇನೆ. ಈ ವಿಷಯದಲ್ಲಿ ಯಾವುದೇ ಕಾಂಪ್ರಮೈಸ್ ಇಲ್ಲ. ಕಥೆಗೆ ಆ್ಯಕ್ಷನ್ ಅಗತ್ಯವಿದ್ದರೆ ಮಾಡೇ ಮಾಡುತ್ತೇನೆ. ನನಗೆ ಶಾರ್ಟ್‌ಕಟ್‌ನಲ್ಲಿ ನಂಬಿಕೆಯಿಲ್ಲ. ನನ್ನದೇ ಸ್ಟಂಟ್‌ಗಳನ್ನು ಮಾಡಲು ಇಷ್ಟ. ತಂತ್ರಜ್ಞಾನ ಏನೇ ಮಾಡಿದರೂ ಪರಿಶ್ರಮವನ್ನು ರಿಪ್ಲೇಸ್ ಮಾಡಲು ಸಾಧ್ಯವಿಲ್ಲ' ಎಂದಿದ್ದಾರೆ.

ಮಗಳು ನಿವೇದಿತಾ ನಿರ್ಮಾಣದ ಮೊದಲ ಸಿನಿಮಾ 'ಫೈರ್‌ಫ್ಲೈ' ಸಿನಿಮಾ ಏ. 24ರಂದು ಬಿಡುಗಡೆಯಾಗುತ್ತಿದ್ದು, ಅದರಲ್ಲಿಯೂ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಒಂದೇ ಕುಟುಂಬದ ಎರಡು ಬ್ಯಾನರ್‌ಗಳ ಕುರಿತ ಪ್ರಶ್ನೆಗೆ ಉತ್ತರಿಸಿರುವ ಅವರು, 'ಶ್ರೀ ಮುತ್ತು ನಿವೇದಿತಾಳ ಸಿನಿ ಸರ್ವೀಸ್. ಗೀತಾ ಪಿಕ್ಚರ್ಸ್ ನನ್ನ ಪತ್ನಿ ನೋಡಿಕೊಳ್ಳುತ್ತಾರೆ. ಈ ಎರಡೂ ಬ್ಯಾನರ್‌ಗಳ ಉದ್ದೇಶ ಒಂದೇ. ಒಳ್ಳೆಯ ಸಿನಿಮಾ ನೀಡುವುದು' ಎಂದು ವಿವರಿಸಿದ್ದಾರೆ.

ಆಗಸ್ಟ್ 15ಕ್ಕೆ ಅವರ ನಟನೆಯ '45' ಸಿನಿಮಾ ಬಿಡುಗಡೆಯಾಗುತ್ತಿದೆ. 'ಜೈಲರ್ 2' ಸಿನಿಮಾದಲ್ಲಿಯೂ ನಟಿಸುತ್ತಿದ್ದು, 'ಭೈರವನ ಕೊನೇ ಪಾಠ' ಕೂಡ ಪಟ್ಟಿಯಲ್ಲಿದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಹೇಮಂತ್ ರಾವ್ ಅವರ ಮತ್ತೊಂದು ಸಿನಿಮಾದಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ■

# ಕರಾವಳಿ ಚೆಲುವೆಯ ಸಿನಿಮಾ ಒಲವು



'ದಿ ಡೆವಿಲ್' ಸಿನಿಮಾದಲ್ಲಿ ಅಭಿನಯಿಸುತ್ತಿರುವ ಕರಾವಳಿ ಬೆಡಗಿ ರಚನಾ ರೈ, ಸದ್ಯ ಕನ್ನಡದೊಂದಿಗೆ ಬೇರೆ ಭಾಷೆಯ ಸಿನಿಮಾಗಳಲ್ಲಿಯೂ ನಟಿಸುವ ಅಭಿಲಾಷೆ ವ್ಯಕ್ತಪಡಿಸಿದ್ದಾರೆ.

ಪುತ್ತೂರಿನಲ್ಲಿ ಹುಟ್ಟಿ ಬೆಳೆದ ರಚನಾ, ಈ ಮುನ್ನ ತುಳು ಸಿನಿಮಾದಲ್ಲಿ ನಟಿಸಿದ್ದರು. ಅದೇ ಅನುಭವದೊಂದಿಗೆ ಕನ್ನಡ ಸಿನಿಮಾರಂಗಕ್ಕೂ ಕಾಲಿಟ್ಟಿದ್ದಾರೆ.

'ಮೊದಲು ಪಶುವೈದ್ಯೆ ಆಗಬೇಕು ಎಂದುಕೊಂಡಿದ್ದೆ. ಆ ಕೆಲಸ ನನಗೆ ಹೊಂದುವುದಿಲ್ಲ ಎಂದು ಕೈಬಿಟ್ಟೆ. ಆ ಸಮಯದಲ್ಲಿ ನೃತ್ಯ, ನಟನೆಯೆಡೆಗೆ ಹಾದಿ ಬದಲಿಸಿದೆ. ಅದು ಇಲ್ಲಿಗೆ ಕರೆತಂದಿದೆ' ಎಂದು ತಮ್ಮ ಹಿನ್ನೆಲೆಯನ್ನು ತೆರೆದಿಟ್ಟಿದ್ದಾರೆ.

'ಕನ್ನಡದೊಂದಿಗೆ ಬೇರೆ ಭಾಷೆಗಳಲ್ಲಿಯೂ ಅಭಿನಯಿಸಬೇಕೆಂಬ ಆಸೆಯಿದೆ. ಕನ್ನಡ ನಟಿಯರು ಬೇರೆ ಭಾಷೆಯಲ್ಲಿ ಬೆಳೆಯುವುದನ್ನು ಕನ್ನಡದವರೂ ಪ್ರೋತ್ಸಾಹಿಸುತ್ತಾರೆ. ಆದರೆ ನಮ್ಮ ಬೇರನ್ನು ಎಂದಿಗೂ ಮರೆಯಬಾರದು ಎಂದು ಬಯಸುತ್ತಾರೆ. ಅದನ್ನು ನಾನು ಎಲ್ಲಿಗೇ ಹೋದರೂ ಮರೆಯುವುದಿಲ್ಲ' ಎಂದಿದ್ದಾರೆ. ■